**OS-88/2021** **ಡಿ.ಡಬ್ಲ್ಯೂ-1 (ಜೀವನ್)**

ದಿನಾಂಕಃ **25.04.2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು : ವಾದಿ ಪರ ಶ್ರೀ ಕೆ.ಎಸ್.ಎನ್. ವಕೀಲರಿಂದ :**

ನಿಡಿ-16 ರಲ್ಲಿರುವ ಶಾಂತಮ್ಮ ನನ್ನ ಅಜ್ಜಿಯಾಗಿರುತ್ತಾರೆ. ಶಿವಕುಮಾರ ಮತ್ತು ರಮೇಶರವರುಗಳು ನನ್ನ ಸೋದರಮಾವಂದಿರಾಗಿರುತ್ತಾರೆ. ನಿಡಿ-16 ರಲ್ಲಿ ನಮೂದಿಸಿರುವ ಹಣವನ್ನು ಯಾವ ಮೂಲದಿಂದ ತರಬೇಕೆಂದು ಅದರಲ್ಲಿ ನಮೂದಿಸಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ನಿಡಿ-16 ರಲ್ಲಿ ಬಾಬುರಾಯನಕೊಪ್ಪಲಿನ ವಿಜಯಾ ಬ್ಯಾಂಕಿನಲ್ಲಿ ರೂ.30,00,000/- ಹಣವನ್ನು ಸಾಲವಾಗಿ ಪಡೆದು ವ್ಯಾಪಾರವನ್ನು ಪ್ರಾರಂಭಿಸಬೇಕೆಂದು ನಮೂದು ಇರುವ ಬಗ್ಗೆ ನನಗೆ ಮಾಹಿತಿ ಇಲ್ಲ. 1994 ಕ್ಕಿಂತ ಮುಂಚೆ ಬೋರಯ್ಯನ ಕುಟುಂಬದಲ್ಲಿ ವಿಭಾಗ ಮಾಡಿಕೊಂಡ ಬಗ್ಗೆ ನನಗೆ ಮಾಹಿತಿ ಇಲ್ಲ. ನಿಡಿ-16 ರಲ್ಲಿ ತಿಳಿಸಿದ ಪ್ರಕಾರ ಯಾವ ವರ್ಷ ಮತ್ತು ದಿನಾಂಕದಂದು ವ್ಯಾಪಾರ ಪ್ರಾರಂಭವಾಯಿತು, ಸದರಿ ವ್ಯಾಪಾರ ಎಲ್ಲಿಯವರೆಗೆ ನಡೆಯಿತು ಎಂದು ನನಗೆ ಮಾಹಿತಿ ಇಲ್ಲ. ಸದರಿ ಬೋರಯ್ಯನವರು ಒಟ್ಟು ಕುಟುಂಬದ ಆಸ್ತಿಗಳನ್ನು ಆಧಾರ ಮಾಡಿ ಸಾಲ ಪಡೆದುಕೊಂಡಿದ್ದ ಬಗ್ಗೆ ನನಗೆ ಮಾಹಿತಿ ಇಲ್ಲ. ವಿಜಯಾ ಬ್ಯಾಂಕಿನವರು ಸಾಲ ಮಂಜೂರು ಮಾಡಿದ್ದ ಬಗ್ಗೆ ನಾನು ದಾಖಲೆ ನೋಡಿಲ್ಲ. ಪಾಲಹಳ್ಳಿಯಲ್ಲಿರುವ ಕಲ್ಯಾಣ ಮಂಟಪದಲ್ಲಿಯೇ ವ್ಯಾಪಾರ ಮಾಡಬೇಕೆಂದು ನಿಡಿ-16 ರಲ್ಲಿ ಬರೆದಿದೆ ಎಂದರೆ ಸರಿಯಲ್ಲ. ವ್ಯಾಪಾರ ಮಾಡಲು ಪಡೆದ ಲೈಸೆನ್ಸ್ ಮತ್ತು ಲೆಕ್ಕಪತ್ರದ ದಾಖಲೆಗಳನ್ನು ನಾನು ನೋಡಿಲ್ಲ.

**2.** ನಿಪಿ-27 ರಲ್ಲಿ ನಮೂದಿಸಿರುವ ಚೋ.ಶಿವಣ್ಣನ ಮಗ ಜೀವನ್ ಎಂದರೆ ನಾನೇ ಇರುತ್ತೇನೆ. ಸದರಿ ನಿಪಿ-27 ದಾನಪತ್ರವಾಗಿರುತ್ತದೆ. ಅದನ್ನು ದಿನಾಂಕಃ 02.09.2011 ರಂದು ಬರೆಯಲಾಗಿದೆ. ಸದರಿ ದಾಖಲೆ ರತ್ನಾಂಭ ಸಮುದಾಯ ಭವನಕ್ಕೆ ಸಂಬಂಧಪಟ್ಟ ದಾಖಲೆ ಎಂದರೆ ಸರಿ. ಇದಲ್ಲದೇ ನನಗೆ,

ನನ್ನ ಸೋದರ ಮಾವನ ಮಗನಾದ ಲೇಖನ್‌ಗೌಡರವರಿಗೆ ಇನ್ನೊಂದು ದಾನಪತ್ರವನ್ನು ಬರೆದುಕೊಟ್ಟಿರುತ್ತಾರೆಂದರೆ ಸರಿ. ಸದರಿ ದಾನಪತ್ರ ನಿಡಿ-5 ಆಗಿದ್ದು, ಅದನ್ನು ದಿನಾಂಕಃ 07.01.2021 ರಂದು ಬರೆಯಲಾಗಿದೆ ಎಂದರೆ ಸರಿ. ಸದರಿ ದಾಖಲೆಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ನಿಪಿ-27 ನ್ನು ನಿಡಿ-5 ದಾನಪತ್ರವನ್ನು ಮಾಡುವ ಪೂರ್ವದಲ್ಲಿ ರದ್ದುಮಾಡಿದ ಬಗ್ಗೆ ದಾಖಲೆ ಇದೆ, ಆ ಬಗ್ಗೆ ದಾಖಲೆಯನ್ನು ನೋಡಬೇಕಾಗಿದೆ. ರದ್ದು ಮಾಡಿದ ದಾಖಲೆಯನ್ನು ಈಗ ನ್ಯಾಯಾಲಯದ ಮುಂದೆ ಹಾಜರು ಮಾಡಿಲ್ಲ. ಆ ರೀತಿ ಯಾವುದೇ ರದ್ದುಮಾಡಿದ ಬಗ್ಗೆ ದಾಖಲೆ ಇಲ್ಲ. ನಾನು ಹಾಗೂ ನನ್ನ ಸೋದರ ಮಾವನ ಮಗ ಚೌಟರಿಯ ಆಸ್ತಿಯನ್ನು ಕಬಳಿಸಬೇಕೆಂದು ದಾಖಲೆಗಳನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಈ ದಿನ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇ**

**ಅಪರ ಹಿರಿಯ ಸಿಜೆ, ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**